ಶ್ರೀ ಟಿ. ಸೋಮಪ್ಪ.—ಸ್ವಾಮಿ, ನಗರಿ ಬೊಮ್ಮನಹಳ್ಳಿ ಮತ್ತು ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಳ್ಳತಕ್ಕ ಪ್ರಪೋಸಲ್ ಇದ್ದರೂ ಕೂಡ ಏತಕ್ಕೆ ತೆಗೆದು ಕೊಳ್ಳುತ್ತಿಲ್ಲ?

ಶ್ರೀ ಎಂ. ಮಲ್ಲಪ್ಪ.—ಎಲ್ಲವನ್ನೂ ಏಕಕಾಲಕ್ಕೆ ತೆಗೆದುಕೊಳ್ಳುವುದಕ್ಕೆ ಹಣದ ತೊಂದರೆ ಇದೆ. ಇವೊತ್ತು ೨೦೧ ಆಸ್ಪತ್ರೆಗಳಿಗೆ ಸುಮಾರು ೫೦೨ ಲಕ್ಷ ರೂಪಾಯಿ ಖರ್ಚಾಗುತ್ತದೆ. ಎಲ್ಲಾ ಆಸ್ಪತ್ರೆ ಗಳನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದೆ. ಆದರೆ ಈ ವರ್ಷ ೨೦೧ ಆಸ್ಪತ್ರೆಗಳನ್ನು ತೆಗೆದುಕೊಳ್ಳುತ್ತೇವೆ, ಮುಂದಿನ ವರ್ಷ ೨೦೧ ಆಸ್ಪತ್ರೆಗಳನ್ನು ತೆಗೆದುಕೊಳ್ಳುತ್ತೇವೆ. ಹೀಗೆ ೧–೪–೧೯೬೯ ರಿಂದ ಎಲ್ಲಾ ತಾಲ್ಲೂಕುಗಳಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಕೆಲ ಕೆಲವು ಆಸ್ಪತ್ರೆಗಳನ್ನು ತೆಗೆದುಕೊಳ್ಳ ಬೇಕೆಂದು ಮಾಡಿಕೊಂಡಿದ್ದೇವೆ.

Holding elections to the City Municipal Corporations

503 SRI T. R. SHAMANNA (Basavanagudi)—Will the Minister for Municipal Administration be pleased to state:—

(a) whether it is not a fact that Government had held out an assurance before the House for holding Elections to the City Municipal Corporations at an early date ;

(b) if so, when the Elections to the Municipal Corporations will be held ?

SRI H. C. SRIKANTAIAH (Minister for Municipal Administration)—

(a) Yes.

(b) In respect of Bangalore City, elections will be held after the extension of the limits of the Bangalore City Corporation already notified by Government and after delimitation of divisions. In respect of other Corporations also action will be taken to hold elections early.

ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ, ನಮ್ಮ ಮಾನ್ಯ ಮಂತ್ರಿಗಳು ಹಿಂದೆ ಆಗಸ್ಟ್ ತಿಂಗಳಿ ನಲ್ಲಿಯೇ ಎಲೆಕ್ಷನ್ ಆಗುತ್ತದೆಂದು ಹೇಳಿದ್ದರು. ಡಿಸೆಂಬರ್ ಆಯಿತು, ಮಾರ್ಚ್ ಆಯಿತು, ಈಗ ಬಹಳ ಬುದ್ಧಿವಂತಿಕೆಯಿಂದ ಆದಷ್ಟು ಜಾಗ್ರತೆಯಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇಂತಹ ದಿವಸ ವೆ ಎಲೆಕ್ಷನ್ ನಡೆಯುತ್ತದೆ ಎಂದು ಖಚಿತವಾಗಿ ಮಾನ್ಯ ಮಂತ್ರಿಗಳು ತಿಳಿಸಲಿಕ್ಕೆ ಸಾಧ್ಯವೇ ?

† ಶ್ರೀ ಪೆಚ್. ಸಿ. ಶ್ರೀಕಂಠಯ್ಯ —ಅಧ್ಯಕ್ಷರೆ, ಈಗಾಗಲೇ ಪುರಸಭೆಗಳಿಗೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಿ ತಾರೀಖು ನಿಗದಿ ಮಾಡಲಿಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಕಾರ್ಪೊರೇಷನ್‌ಗೆ ನಿಗದಿ ಮಾಡಿಲ್ಲ. ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಈಗ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಡಿವಿಜನ್ ಗಳು, ವೋಟರ್‌ಲಿಸ್ಟ್ ಆಗಬೇಕಾದ್ದು ಅಗತ್ಯವಿದೆ, ಈಗ ಇರತಕ್ಕದ್ದರಲ್ಲಿ ಸುಮಾರು ೧೧೦ ಸಳ್ಳಿಗಳನ್ನು ಸೇರಿಸುವುದರಿಂದ ವೋಟರ್‌ಲಿಸ್ಟ್ ಮಾಡಲಿಕ್ಕೆ ತಡವಾಗುತ್ತದೆ. ಅಲ್ಲದೆ ಅನೇಕ ತಪ್ಪುಗಳು ಕೂಡ ಆಗುತ್ತವೆ. ಅಲ್ಲದೆ ಅನೇಕ ಹೆಸರುಗಳು ಬಿಟ್ಟು ಹೋಗತಕ್ಕದ್ದು ಇರುತ್ತವೆ. ಆದುದರಿಂದ ವೋಟರ್ ಲಿಸ್ಟ್ ಮಾಡುವಾಗ ಸಾಧ್ಯವಾದಷ್ಟು ಎಚ್ಚರಿಕೆ ವಹಿಸಿ ಯಾವುದೂ ಬಿಡದ ಹಾಗೆ ಕ್ರಮವಾಗಿ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ಎಚ್ಚರಿಕೆ ವಹಿಸುತ್ತೇವೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಬೆಂಗಳೂರು ನಗರ ಕಾರ್ಪೊರೇಷನ್ ಎಷ್ಟು ಡಿವಿಜನ್‌ಗಳಾಗಿ ಮಾಡುತ್ತೀರಾ ? ಎಲೆಕ್ಟೊರೋಲ್ ಇಂಟೆನ್‌ಸಿಫೈ ಆಗಿ ರಿವೈಸ್ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ಇದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಎಲ್ಲಾ ಮುನಿಸಿಪಾಲಿಟಿಗಳಿಗೂ ಕೂಡಾ ಚುನಾವಣೆ ದಿವಸವನ್ನು ನಿಗದಿ ಮಾಡಿದ್ದೀರಾ ? ಮಂಗಳೂರು ಮುನಿಸಿಪಾಲಿಟಿ ರದ್ದು ಮಾಡಿರುವ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಇದೆ ಎಂದು ಕೇಳಿದ್ದೇನೆ. ಈಗ ನಮ್ಮ ಸ್ಟೇಟಿನಲ್ಲಿರತಕ್ಕ ಎಲ್ಲಾ ಮುನಿಸಿಪಾಲಿಟಿಗಳಿಗೂ ಕೂಡ ಚುನಾವಣೆಯ ದಿವಸವನ್ನು ನಿಗದಿ ಮಾಡಿದ್ದೀರಾ ? ಮಾಡಿದ್ದರೆ ಯಾವ ಸಮಯದಲ್ಲಿ ಚುನಾವಣೆ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಮೇ ತಿಂಗಳ ಅಂತ್ಯದಲ್ಲಿ ಚುನಾವಣೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ, ಆಯಾಯ ಜಿಲ್ಲಾಧಿಕಾರಿಗಳಿಗೆ ತಾರೀಖು ನಿಗದಿ ಮಾಡಿ ನೋಡಿಫಿಕೇಷನ್ ಮಾಡಲಿಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ.

ಶ್ರೀ ಟಿ. ಆರ್. ಶಾಮಣ್ಣ.—ಈ ನಗರ ಸಭೆಯ ಡಿವಿಜನ್‌ಗಳನ್ನು ವಿಂಗಡಿಸುವುದರಲ್ಲಿ ಅಥವಾ ಮತದಾರರ ಪಟ್ಟಿಯನ್ನು ಮಾಡುವುದರಲ್ಲಿ ಮಂತ್ರಿಗಳ ಕೈವಾಡ ಏನಾದರೂ ಇದೆಯೇ ? ಚುನಾವಣೆ ನಡೆಸುವ ಅಧಿಕಾರವನ್ನು ಸಂಪೂರ್ಣವಾಗಿ ನಗರಸಭೆಗೆ ಬಿಡುತ್ತೀರಾ ಅಥವಾ ಸರ್ಕಾರದವರೆ ಇಟ್ಟು ಕೊಳ್ಳುತ್ತೀರೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರಲ್ಲಿ ಮಂತ್ರಿಗಳ ಕೈವಾಡ ಏನೂ ಇರುವುದಿಲ್ಲ. ಮಾನ್ಯ ಶಾಮಣ್ಣನವರ ಕೈವಾಡ ಏನಾದರು ನಡೆಯಬಹುದು.

ಅಧ್ಯಕ್ಷರು : ಪ್ರಶ್ನೆ ನಂ ೭೨೨. ತಡೆಹಿಡಿಯಲಾಗಿದೆ.

Rates of fees fixed for obtaining certified copies of documents

6 SRI T. B. JAYACHANDRA (Kallambella).—Will the Minister for Revenue be pleased to state.—

(a) whether there are any prescribed rates as fixed for obtaining certified copies like Index of Lands, Khatha Extracts, if so, what are they ;

(b) whether such fees have to be paid in cash or in the form of stamps ;

(c) whether issuing authorities of such documents maintain any receipt books to account the amount received by them ;

(d) if so, the total approximate amount being received in Tumkur District for each year ?

SRI B. BASAVALINGAPPA (Minister for Revenue).—

(a) Yes. Under Rule 140 of Karnataka Land Revenue Rules, 1964 certified copies are to be issued on payment of fees as noted below :

(i) For every 100 words or thereof 0-40 paise for copying. For comparing, one-fourth of the above.

(ii) If the original is in tabular form, for copying it, twice the rates noted above.